

ಮೇಸ್ಟ್ರು ಟೀಚರ ಯಾವುದೇ ಹವ್ಯಾಸಕ್ಕೆ ಇಲ್ಲವೆನ್ನುತ್ತಿರಲಿಲ್ಲ. ಊರವರ ಕಾರ್ಯಕ್ರಮಗಳಿಗೆ ಟೀಚರೇ ಹಣ ಕೊಟ್ಟು ಬಿಡುತ್ತಿದ್ದರು. ಒಮ್ಮೆ ಮಾತ್ರ ಒಂದು ಸಂಘರ್ಷವೇ ನಡೆದು ಹೋಯ್ತು.

ಅಂದು ಮಧ್ಯರಾತ್ರಿ ಇಟ್ಟಿಗೆ ಪೂಜನಾ ಸಮಿತಿಯವರು ಮೇಸ್ಟ್ರ ಅಂಗಳಕ್ಕೆ ಬಂದು ಶಂಖ ಊದಿ ಜಾಗಟೆ ಬಡಿದರು. ಸಕ್ಕರೆ ನಿದ್ದೆಯಲ್ಲಿದ್ದ ಮೇಸ್ಟ್ರಿಗೆ ಎಚ್ಚರವಾಗಿ ಹೊರ ಬಂದು ನೋಡುತ್ತಾರೆ. ಐವತ್ತಕ್ಕಿಂತಲೂ ಹೆಚ್ಚು ಮಂದಿ ಬಂದಿದ್ದಾರೆ.

'ಏನಿದು?'

'ನಾವು ಇಟ್ಟಿಗೆ ಪೂಜನಾ ಸಮಿತಿಯವರು. ನಿಮ್ಮ ದೇಣಿಗೆ ಬೇಕು.'

'ನಮ್ಮೂರಲ್ಲಿ ರಾಮ ಮಂದಿರ ಇದೆಯೇ?'

'ಇಲ್ಲ.'

'ನಮ್ಮೂರಲ್ಲಿ ರಾಮ ಮಂದಿರ ಕಟ್ಟುವುದಾದರೆ ನನ್ನ ದೇಣಿಗೆ ಕೊಡುತ್ತೇನೆ. ಬೇರೆಲ್ಲೋ ಹೋಗಿ ನಾವೆಲ್ಲಾ ರಾಮನನ್ನು ನೋಡಲುಂಟೆ?'

'ನಿಮಗೆ ಇಷ್ಟವಿದ್ದರೆ ಕೊಡಿ. ಅಧಿಕ ಪ್ರಸಂಗ ಮಾತಾಡಬೇಡಿ.'

'ರಾಮನನ್ನು ರಾಜಕೀಯಕ್ಕೆ ಬಳಸುವುದು ನನಗೆ ಇಷ್ಟವಿಲ್ಲ.'

ಬಂದವರು ಅಪ್ರತಿಭರಾದರು.

'ಸರಿ. ನಾವು ಹೋಗಿ ಹಾಗೆ ಹೇಳುತ್ತೇವೆ.'

ಕ್ರಾಸ್ತಾ ಟೀಚರ್ ಮೇಸ್ಟ್ರನ್ನು ಒಳಕರೆದರು.

ಮೇಸ್ಟ್ರು ಅಷ್ಟು ಕ್ರುದ್ಧರಾದುದನ್ನು ಕ್ರಾಸ್ತಾ ಟೀಚರು ಎಂದೂ ನೋಡಿರಲಿಲ್ಲ.

'ಇಲ್ಲ ಟೀಚರ್. ರಾಜಕೀಯಕ್ಕೆ ದೇವರನ್ನು ತಂದರೆ ದೇಶ ಭಾವನಾತ್ಮಕವಾಗಿ ಒಡೆದುಹೋಗುತ್ತದೆ. ನಿಮಗದು ತಿಳಿಯುವುದಿಲ್ಲ. ಅದು ಮಾನವೀಯ ಮೌಲ್ಯಗಳಿಗೆ ವಿರುದ್ಧವಾದುದು.'

ಇಟ್ಟಿಗೆ ಪೂಜನಾ ಸಮಿತಿಯವರು ಮೇಸ್ಟ್ರನ್ನು ನಾಸ್ತಿಕ, ಕಮ್ಯುನಿಷ್ಟ ಎಂದೆಲ್ಲಾ ಬಯ್ಯುತ್ತಾ ಹೊರಟುಹೋದರು. ಆ ಬಳಿಕ ಕೆಲವು ದಿನ ಮೇಸ್ಟ್ರು ರಾತ್ರೆ ಹೊತ್ತು ಹೊರಗೆ ಹೋಗದಂತೆ ಕ್ರಾಸ್ತಾ ಟೀಚರು ನೋಡಿಕೊಂಡರು.

ಮೇಸ್ಟ್ರಿಗೆ ಒಂದಷ್ಟು ಬೆದರಿಕೆ ಕರೆಗಳು ಬಂದವು. ಮೇಸ್ಟ್ರು ಯಾವುದಕ್ಕೂ ಜಗ್ಗಲಿಲ್ಲ.

ಮೇಸ್ಟ್ರ ಮಕ್ಕಳು ಜಾತಿ ನೋಡದೆ ತಮ್ಮ ಇಷ್ಟದವರನ್ನು ಮದುವೆ ಮಾಡಿಕೊಂಡರು. ಮೇಸ್ಟ್ರು ಮತ್ತು ಕ್ರಾಸ್ತಾ ಟೀಚರು ಮುಂದೆ ನಿಂತು ಸರಳ ಮದುವೆ ನಡೆಸಿಕೊಟ್ಟರು. ಮಗಳಿಗೆ ಮಗಳಾದಾಗ ಸಂಭ್ರಮಿಸಿದರು. ಕ್ರಾಸ್ತಾ ಟೀಚರು ಒಂದು ದಿನ ತಾವಾಗಿಯೇ ಹೇಳಿದರು.

'ಇನ್ನು ಚಿಂತಿಲ್ಲ ಮೇಸ್ಟ್ರೆ. ಮಗ ಇದ್ದಾನೆ, ಅಳಿಯ ಇದ್ದಾನೆ. ಅವರಿಬ್ಬರ ಸ್ನೇಹಿತರೂ ಬಂದೇ ಬರುತ್ತಾರೆ.'

'ಯಾತಕ್ಕೆ?'

'ನನ್ನನ್ನು ಗುಂಡಿಗೆ ಹಾಕಲಿಕ್ಕೆ.'

ಮೇಸ್ಟ್ರ ಎದೆ ಧಸಕ್ಕೆಂದಿತು.

'ನೀವು ಪದೇ ಪದೇ ಸಾವಿನ ಸುದ್ದಿಯನ್ನೇ ಆಡುತ್ತಿದ್ದೀರಿ. ಯಾಕೋ ಕಿರಿಕಿರಿಯಾಗುತ್ತದೆ.'

ಕ್ರಾಸ್ತಾ ಟೀಚರು ಮೇಸ್ಟ್ರ ಮುಖವನ್ನೇ ನೋಡಿದರು.

'ಜೀವನದಲ್ಲಿ ಇನ್ನು ಅನುಭವಿಸಲಿಕ್ಕೆ ಏನೂ ಉಳಿದಿಲ್ಲ. ಹಾಗಾಗಿ ಸಾವಿನ ಮಾತು ಬರುತ್ತಿದೆ ಎಂದು ಕಾಣುತ್ತದೆ.'

ಮೇಸ್ಟ್ರು ನಿರುತ್ತರರಾದರು.

ಮಗಳಿಗೊಬ್ಬಳು ಮಗಳಾದಾಗ ಅಳಿಯ ಹೇಳಿದ್ದ. 'ಒಬ್ಬ ಕುಲದೀಪಕ ಬೇಕು.'

ಕ್ರಾಸ್ತಾ ಟೀಚರಿಗೆ ಅಂದು ಸಿಟ್ಟು ಬಂದಿತ್ತು.

'ನಾನು ಮುದುಕಿಯಾಗಿಬಿಟ್ಟೆ ಅಳಿಯಂದ್ರೆ. ಈ ಮಗುವನ್ನು ಹೇಗೋ ನೋಡಿಕೊಳ್ಳುತ್ತಿದ್ದೇನೆ. ಇನ್ನೊಂದನ್ನು ನೋಡಿಕೊಳ್ಳುವ ವಯಸ್ಸಲ್ಲ ನಂದು. ಇಷ್ಟಕ್ಕೂ ಯಾವ ಸೊತ್ತನ್ನು ಅನುಭವಿಸಲು ಕುಲದೀಪಕ ಬೇಕು. ನಿಮ್ಮಲ್ಲಿ ಏನೆಲ್ಲಾ ಐಶ್ವರ್ಯ ಇವೆಯೋ ಅವನ್ನೆಲ್ಲಾ ಈ ಕುಲದೀಪಿಕಳಿಗೆ ಕೊಟ್ಟು ಬಿಡಿ. ಹೆಣ್ಣುಮಕ್ಕಳೇ ನಮ್ಮನ್ನು ಮುದಿತನದಲ್ಲಿ ನೋಡಿಕೊಳ್ಳುವವರು.'

ಅಂಥಾ ಕ್ರಾಸ್ತಾ ಟೀಚರು ಸತ್ತುಹೋಗಿದ್ದಾರೆ.

ಮಾತೃಮಂಡಳಿಯವರು ಮೇಸ್ಟ್ರನ್ನು ಸಮಾಧಾನಿಸಿದರು: 'ಟೀಚರು ಪುಣ್ಯವಂತರು. ಮದುವೆಯಾದ ಮೇಲೆ ನಮ್ಮವರೇ ಆಗಿಬಿಟ್ಟರು. ಅವರ ಅಂತಿಮ ಸಂಸ್ಕಾರ ಸನಾತನ ನಂಬಿಕೆ ಪ್ರಕಾರವೇ ಆಗುವುದು ಒಳ್ಳೆಯದು. ನೀವು ಹ್ಞೂಂ ಅಂದ್ರೆ ಪುರೋಹಿತರನ್ನು ಬರಹೇಳುತ್ತೇವೆ. ರುದ್ರಭೂಮಿಯಲ್ಲೇ ಶವಸಂಸ್ಕಾರ ಆಗಲಿ. ನಾವೆಲ್ಲಾ ಇದ್ದೇವೆ. ನೀವು ಯೋಚಿಸಬೇಡಿ.'

ಮೇಸ್ಟ್ರಿಗೆ ಮನಸ್ಸಲ್ಲಿ ಆ ಘಟನೆ ಮೂಡಿತು. ಕ್ರಾಸ್ತಾ ಟೀಚರ ಅಣ್ಣ ಮತ್ತು ಅಕ್ಕ ಇದ್ದಕ್ಕಿದ್ದ ಹಾಗೆ ನಿಧನರಾದಾಗ ಟೀಚರು ಕಣ್ಣೀರು ಹಾಕುತ್ತಾ ಮೇಸ್ಟ್ರಲ್ಲಿ ಹೇಳಿದ್ದರು. 'ಅಣ್ಣ ಹೋದ. ಅಕ್ಕ ಹೋದಳು. ಮುಂದಿನದು ನನ್ನ ಸರದಿ.'

ಮೇಸ್ಟ್ರಿಗೆ ಕಸಿವಿಸಿಯಾಯಿತು.

ಅದು ಸಾವಿನ ಹೆದರಿಕೆಯಿಂದಲ್ಲ. ಒಬ್ಬರು ಸತ್ತು ಇನ್ನೊಬ್ಬರು ಉಳಿಯುವಾಗಿನ ನೋವು.

ಅದನ್ನು ಹೇಳುವಂತಿಲ್ಲ.

'ಅವೆಲ್ಲಾ ಆಕಸ್ಮಿಕ. ನೀವು ಸುಮ್ಮನೆ ನನ್ನ ಎದೆನೋವು ಹೆಚ್ಚಿಸುತ್ತೀರಿ.'

'ಸಾವು ಸಹಜವಲ್ಲವೇ? ಆದರೆ ನನಗೆ ಚಿಂತೆಯಾಗಿದೆ. ಅರುವತ್ತರ ನಂತರ ನಿಮ್ಮ ಸೆಕೆಂಡ್ ಚೈಲ್ಡ್‌ಹುಡ್ ಆರಂಭವಾಗಿದೆ. ಒಂದು ಕಾಲದಲ್ಲಿ ಒಳ್ಳೆಯ ಕುಕ್ ಆಗಿದ್ದ ನೀವು ಈಗ ಚಹಾ ಮಾಡುವುದನ್ನೂ ಮರೆತಿದ್ದೀರಿ. ನಲ್ಲಿ ಆನ್ ಮಾಡಿದರೆ ಆಫ್ ಮಾಡಲು ಮರೆಯುತ್ತೀರಿ. ಯಾವ ಮಾತ್ರೆ ಯಾವಾಗ ತೆಗೆದುಕೊಳ್ಳಬೇಕೆಂಬುದನ್ನೂ ಮರೆತಿದ್ದೀರಿ. ಕಣ್ಣಿನಿಂದಾಗಿ ಓದಲು ಬರೆಯಲು ಆಗುತ್ತಿಲ್ಲ. ನಾನು ಹೋದರೆ ಈ ಒಂಟಿ ಮನೆಯಲ್ಲಿ ಹೇಗಿರುತ್ತೀರಿ?'

ಮೇಸ್ಟ್ರಿಗೆ ಬೇಸರವಾಗಲಿಲ್ಲ.

'ನೀವು ಮೊದಲು ಹೋಗದಿದ್ದರಾಯಿತು ಟೀಚರೇ.'

ಮೇಸ್ಟ್ರು ವರ್ತಮಾನಕ್ಕೆ ಮರಳಿದರು.

ಮಾತೃಮಂಡಳಿಯವರ ಮಾತು ಮುಗಿಯುತ್ತಿದ್ದಂತೆ ಟೀಚರ್ ತಮ್ಮ ಕಾಣಿಸಿಕೊಂಡ. ಅವನ ಮಗ ದೂರದೂರಲ್ಲಿ ಪಾದ್ರಿಯಾಗಿದ್ದ. ಮಗ ಮಾತೃಮಂಡಳಿಯವರಿಗೆಂದ. 'ಟೀಚರತ್ತೆಯವರ ಅಂತ್ಯಸಂಸ್ಕಾರ ಚರ್ಚಿನ ಗ್ರೇವ್‌ಯಾರ್ಡಿನಲ್ಲಿ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ನಮ್ಮ ಜಾಗದಲ್ಲಿ ಮಾಡಬಹುದು. ಅಂತ್ಯ ವಿಧಿಗಳಿಗೆ ಬೇರೆ ಫಾದರ್ ಬರಬೇಕಾಗಿಲ್ಲ. ನಾನೇ ಇದ್ದೇನೆ.'

ವಾತಾವರಣ ಬಿಸಿ ಏರಿತು.

ಮೇಸ್ಟ್ರು ಎದ್ದು ನಿಂತು ದೃಢವಾದ ಸ್ವರದಲ್ಲಿ ಹೇಳಿದರು.

'ಅಂತ್ಯಸಂಸ್ಕಾರ ಟೀಚರ ಇಚ್ಛೆಯಂತೆ ನಡೆಯಬೇಕು. ಅವರೇ ಮಾಡಿದ ಪುಟ್ಟ ತೋಟದ ಮಧ್ಯದಲ್ಲಿ ಶವ ಪೆಟ್ಟಿಗೆಯಲ್ಲಿ ಹಾಕಿ ಅವರನ್ನು ದಫನ್ ಮಾಡಲಾಗುತ್ತದೆ. ಯಾವುದೇ ಧಾರ್ಮಿಕ ವಿಧಿವಿಧಾನಗಳು ಇರುವುದಿಲ್ಲ.'

ಪ್ರತಿಕ್ರಿಯಿಸಿ: feedback@sudha.co.in